# ಒಳ್ಳೆ ವ್ಯಕ್ತಿ ಒಳ್ಳೆ ನಟ



**ಸುಷ್ಮಾ ವೀರ್**
ಸ್ಟಾರ್ ಸುವರ್ಣದ 'ಸತ್ಯಂ ಶಿವಂ ಸುಂದರಂ'ನ ಶುಭಾ

★ *ಶುಭಾಳ ವೇದನೆ ಏನು?*

'ಶುಭಾ' ಅರಸು ಮನೆತನಕ್ಕೆ ಗೌರವವನ್ನು ಬಯಸುವ ಹೆಣ್ಣು. ಆಕೆಗೆ ಸಾಕಷ್ಟು ನೋವುಗಳಿದ್ದರೂ ಅದನ್ನು ತನ್ನ ಮನೆತನದ ಗೌರವಕ್ಕಾಗಿ–ಮಕ್ಕಳಿಗಾಗಿ ಮರೆಯುತ್ತಾಳೆ. ಆಕೆ ಮದ್ಯವನ್ನು ಕುಡಿಯುತ್ತಾಳೆ ಎನ್ನುವ ತಪ್ಪು ಅಭಿಪ್ರಾಯ ಕೂಡ ವ್ಯಕ್ತವಾಗಿದೆ. ಇವತ್ತಿನ ಸಾಮಾಜಿಕ ಸಂದರ್ಭದಲ್ಲಿ ಮದ್ಯ ಸೇವನೆ ಲಿಂಗ ಭೇದ ಇಲ್ಲದೆ ಸಾಮಾನ್ಯ ಆಗಿದೆ. ಆದರೂ ಶುಭಾಳಿಗೆ ಅದರ ವ್ಯಸನ ಇಲ್ಲ. ಆದರೂ ಆರೋಪ ಮಾತ್ರ ಇದೆ. ಅದಾವುದಕ್ಕೂ ಎದೆಗುಂದದೆ ದಿಟ್ಟತನದಿಂದ ಬದುಕನ್ನು ಎದುರಿಸುತ್ತಾಳೆ. ಸಮಾಜಮುಖಿ ಗುಣವುಳ್ಳ ಆಕೆ ಅಂತಃಕರಣದ ಹೆಣ್ಣು. ಎಲ್ಲರಿಗೂ, ಎಲ್ಲದಕ್ಕೂ ನ್ಯಾಯ ಒದಗಬೇಕು ಎಂಬ ವಿಶಾಲ ಮನೋಭಾವದವಳು ಆಕೆ.

★ *ಪ್ರತಿಭಟಿಸಲಾರದಷ್ಟು ಅಸಹಾಯಕತೆ ಆಕೆಗೇಕೆ?*

ಅದು ಅಸಹಾಯಕತೆ ಅಲ್ಲ. ಅವಳು ಪ್ರತಿ ನಿಮಿಷವೂ ತನ್ನ ಪ್ರತಿಭಟನೆಯನ್ನು ದಾಖಲಿಸುತ್ತಾಳೆ. ಬೀದಿಗಿಳಿಯುವುದೇ ಪ್ರತಿಭಟನೆಯ ಪ್ರತೀಕ ಅಲ್ಲ. ಅವಳು ತನ್ನ ಕುಟುಂಬದ ಗೌರವಕ್ಕೆ ಧಕ್ಕೆ ಆಗದಂತೆ ನೋಡಿಕೊಳ್ಳುವ ಕಾಳಜಿಯ ಕಾರಣಕ್ಕೆ ಅದು ಢಾಳಾಗಿ ಕಾಣಿಸುವುದಿಲ್ಲ. ತನ್ನ ಮಕ್ಕಳಿಗೆ ತಾಯ್ತನವನ್ನು ನೀಡಬೇಕು. ಅವರಿಗೆ ಪ್ರೀತಿಯ ಕೊರತೆ ಕಾಡಬಾರದು. ಪತಿಯಿಂದ ಸಾಕಷ್ಟು ಅನ್ಯಾಯ ಆಗಿದೆ. ಅದರ ಬಿಸಿ ಮಕ್ಕಳಿಗೂ ತಟ್ಟದಂತೆ ನೋಡಿಕೊಳ್ಳಬೇಕು. ಅತ್ತೆಯ ಬೆಂಬಲದಿಂದಲೇ ನೋವನ್ನು ನುಂಗಿ ಬದುಕನ್ನು ಗೆಲ್ಲುವ ಹೋರಾಟ ಆಕೆಯದು.

★ *ನಿಮ್ಮ ನಟನಾ ಹಿನ್ನೆಲೆ ಹೇಳಿ?*

ಕಲೆ ನಮ್ಮ ವಂಶವಾಹಿನಿಯ ಸೆಳೆತ. ಗುಬ್ಬಿ ವೀರಣ್ಣ ಅವರ ಮೊಮ್ಮಗಳು ನಾನು. ನನ್ನ ಅಮ್ಮ ಬಿ.ಜಯಶ್ರೀ. ಕಲೆಗಾಗಿ ಮಿಡಿಯುವ ಕುಟುಂಬ ನಮ್ಮದು. ಅಂತಹ ವಾತಾವರಣದಲ್ಲಿ ಬೆಳೆದ ನನಗೆ ಅಭಿನಯ. ಸಹಜವಾಗಿ ಸೆಳೆಯಿತು. ಐದು ಭಾಷೆಯಲ್ಲಿ ಒಟ್ಟು 48 ಸಿನಿಮಾಗಳಲ್ಲಿ ನಟಿಸಿದ್ದೇನೆ. ಅಷ್ಟು ಮಾತ್ರ ಅಲ್ಲದೆ ತೆರೆಮರೆಯಲ್ಲಿಯೂ ಶ್ರಮಿಸಿದ್ದೇನೆ. ನಿರ್ದೇಶನ– ನಿರ್ಮಾಣವನ್ನೂ ಮಾಡಿದ ಅನುಭವ ಇದೆ.

★ *ಕಿರುತೆರೆ – ಹಿರಿತೆರೆ ಬಗ್ಗೆ ಹೇಳುವುದಾದರೆ..*

ಕಲೆಗೆ ಚೌಕಟ್ಟು ಎನ್ನುವುದು ಇಲ್ಲ. ರಂಗಭೂಮಿ ಕಲಾವಿದೆಯಾದ ನಾನು ಡಾನ್ಸ್ ಕೂಡ ಮಾಡುತ್ತೇನೆ. ಸಿನಿಮಾ– ಟಿವಿ ಎನ್ನುವ ಚೌಕಟ್ಟು ನಮ್ಮ ನಮ್ಮ ಮನೋಭಾವಕ್ಕೆ ಸೀಮಿತ. ನಟನೆಯ ಗರ್ಭ ರಂಗಭೂಮಿ. ನಟನೆಯಲ್ಲಿ ಗರ್ಭ ಇರುತ್ತದೆ. ಗರ್ಭ ಎಂದರೆ ಅಸ್ಮಿತ್ವ. ಇದು ಎಲ್ಲದಕ್ಕೂ ಅನ್ವಯವಾಗುತ್ತದೆ. ಪ್ರೀತಿಯ ಬಯಕೆ ಹೊತ್ತ ಗಂಡು– ಹೆಣ್ಣಿಗೆ ಮುಖ ಮುಖ್ಯ ಆಗುತ್ತದೆಯೇ ಹೊರತು ಗರ್ಭ ಮುಖ್ಯ ಆಗುವುದಿಲ್ಲ. ಏನೇ ಅಪವಾದಗಳಿದ್ದರೂ ತಾಯ್ತನದ ಸಂಕೇತವಾದ ಗರ್ಭ ಅದನ್ನೆಲ್ಲಾ ಹೋಗಲಾಡಿಸುತ್ತದೆ. ನಟನೆ ಅಂದಾಗ ಕೂಡ ನನಗೆ ನೆನಪಾಗುವುದು ರಂಗಭೂಮಿ. ಇದೇ ತಾಯಿ ಬೇರು.

★ *ಪಾತ್ರವನ್ನು ಅಭಿನಯಿಸುವುದು ಎಂದರೆ?*

ಅದು ಭಾವನೆಗಳನ್ನು ಅರ್ಥ ಮಾಡಿಕೊಳ್ಳುವ ಕ್ರಿಯೆ. ಜೀವನವನ್ನು ಪರಿಪೂರ್ಣ ಮಾಡುವ ಬಗೆ. ಇಲ್ಲಿ ಯಾವುದೂ ನಾವಲ್ಲ. ಪಾತ್ರವಾಗಿ ನಾವು ಒಳಗೊಳ್ಳಬೇಕು. ಅದಾಗಿ ಕಾಣಿಸಿಕೊಳ್ಳಬೇಕು. ಅಂದರೆ, ಪರಕಾಯ ಪ್ರವೇಶ ಮಾಡಬೇಕು. ಭಾವ ಪರವಶರಾಗಬೇಕು.

★ *ಹೊಸ ತಲೆಮಾರಿನ ನಟ, ನಟಿಯರ ಸಿದ್ಧತೆ ಹೇಗಿರಬೇಕು?*

ಪಾತ್ರವಾಗ ಬಯಸುವ ಎಲ್ಲರೂ ಕೂಡ ಪಾತ್ರವೊಂದಕ್ಕೆ ಜೀವ ನೀಡಬೇಕು. ಅದನ್ನು ಗೌರವದಿಂದ ನೋಡಬೇಕು. ನನ್ನಲ್ಲಿ ಇಲ್ಲದ ಗುಣವನ್ನು ನಾನು ಪ್ರತಿನಿಧಿಸುವಾಗ ಸಮಾಜಮುಖಿ ದೃಷ್ಟಿಯಿರಬೇಕು. ಸರಳವಾಗಿ ಹೇಳಬೇಕು ಅಂದರೆ ಒಳ್ಳೆಯ ವ್ಯಕ್ತಿ ಮಾತ್ರ ಒಳ್ಳೆಯ ನಟನಾಗಲು ಸಾಧ್ಯ. ಕಲಾವಿದನಾಗಿ ಎಂತಹ ಅಪೂರ್ವ ಸ್ಥಾನಮಾನಗಳೇ ಬಂದರೂ ಅವನಲ್ಲಿ ಮುಗ್ಧತೆ ಇದ್ದೇ ಇರಬೇಕು. ಎಲ್ಲರನ್ನೂ ಗೌರವಿಸುವ, ಅರ್ಥ ಮಾಡಿಕೊಳ್ಳುವ ಮನಸ್ಸು ಇರಬೇಕು. ಅಂತಹ ಸ್ವಭಾವ ಇದ್ದರೆ ಮಾತ್ರ ಪರಿಪೂರ್ಣ ನಟನಾಗಲು ಸಾಧ್ಯ. ಅಭಿನಯವನ್ನು ರೂಢಿಸಿಕೊಳ್ಳಬೇಕು ಎಂಬ ಆಶೆ ಇರುವ ಎಲ್ಲರಿಗೂ ಸಮಾಜಮುಖಿ ಗಾಂಭೀರ್ಯ ಬೇಕು ಎಂದೆನ್ನಿಸುತ್ತದೆ.

■ ರಾಘವೇಂದ್ರ